DW-1

**ಸಿಸಿನಂ.12724/2008**

**ದಿ.23.02.2024 ರ ಆದೇಶದ ಮೇರೆಗೆ ದಿ.01.03.2024 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ ಎಸ್ ಎಸ್ ಎಂ ವಕೀಲರಿಂದ ಃ ದೂರುದಾರರ ಪರವಾಗಿ**

12. ನಿಡಿ.1 ಇದು ಜಂಟಿ ನಿರ್ದೇಶಕರು ಸಂಯುಕ್ತ ನಿರ್ಬಂಧಕರ ಕಚೇರಿರವರು ಮಾಡಿದ ಆದೇಶವಾಗಿರುತ್ತದೆ. ಸದರಿ ಆದೇಶ ದಾರುದಾರರು ನೀಡಿದ ದೂರಿನ ಮೇಲೆ ಆಗಿರುತ್ತದೆ ಎಂದರೆ ಸರಿ. ದೂರುದಾರರು ನೀಡಿದ ದೂರಿನ ಪ್ರತಿ ನ್ಯಾಯಾಲಯಕ್ಕೆ ನೀಡಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆ ದೂರುದಾರರು ನೀಡಿರುವ ದೂರು ಅಂದರೆ ಸದರಿ ದೂರನ್ನು ಮಹಮ್ಮದ್ ಸನಾವುಲ್ಲಾ ರವರಿಗೆ ನೀಡಿದ್ದು ಅವರು ಜಂಟಿ ನಿರ್ಬಂಧಕರಿಗೆ ಸದರಿ

21

ದೂರನ್ನು ಕಳುಹಿಸಿರುತ್ತಾರೆ. ಅದರ ಮೇಲೇ ನಿಡಿ.1 ರಂತೆ ದೂರುದಾರರು ಮಾಡಿರುವ ಆರೋಪಿ ನಿರಾಧಾರ ಎಂದು ಆದೇಶ ಆಗಿರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ.71 ಎಂದು ಗುರುತಿಸಲಾಯಿತು.

13. ನಿಡಿ.2 ಸಹ ಜಂಟಿ ನಿರ್ದೇಶಕರು ಸಂಯುಕ್ತ ನಿರ್ಬಂಧಕರ ಮಾಡಿರುವ ಆದೇಶದ ಪ್ರತಿಯಾಗಿರುತ್ತದೆ. ಅದು ದೂರುದಾರರು ನೀಡಿರುವ ದೂರಿನ ವಿರುದ್ದ ತನಿಖೆ ಮಾಡುತ್ತಿರುವ ಮತ್ತು ದೂರುದಾರರು ತನಿಖೆಗೆ ಸಹಕರಿಸುತ್ತಿಲ್ಲ ಎಂದು ಮಾಡಿರುವ ಆದೇಶವಾಗಿರುತ್ತದೆ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಅದು ದೂರುದಾರರು ಜಂಟಿ ನಿರ್ದೇಶಕರಿಗೆ ನೀಡಿರುವ ಮೆಮೊ ಆಗಿರುತ್ತದೆ. ಈ ಎಲ್ಲಾ ಆದೇಶಗಳನ್ನು ನಾನೇ ಮಾಡಿಸುತ್ತಿದ್ದೇನೆ ಎಂದು ದೂರುದಾರರು ರಿಟ್ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಅನುಕೂಲಕ್ಕೆ ತಕ್ಕಂತೆ ನಿಡಿ.1 ಮತ್ತು 2 ಗಳನ್ನು ಆದೇಶ ಮಾಡಿಸಿಕೊಂಡು ಬಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿ ಆದೇಶ ತೆಗೆದುಕೊಂಡು ಬಂದರೆ ನಾನು ಈ ಪ್ರಕರಣದಲ್ಲಿ ಖುಲಾಸೆಯಾಗುತ್ತೇನೆ ಎಂದು ದಾಖಲಾತಿಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

14. ನಿಡಿ.3 ರಿಂದ 5 ದಾಖಲೆಗಳು ಏನು ಅಂತ ನನಗೆ ಗೊತ್ತಾಗುವುದಿಲ್ಲ. ನಿಡಿ.7 ರಾಮದಾಸ್ ರವರು ಸಂಘಕ್ಕೆ ಬರೆದ ಪತ್ರವಾಗಿರುತ್ತದೆ. ಸದರಿ ಪತ್ರದಲ್ಲಿ ರಾಮದಾಸ್ ರವರು ನನ್ನ ವಿರುದ್ದ ಸಾಕ್ಷಿ ಹೇಳಿರುವ ವಿಚಾರದ ಬಗ್ಗೆ ಹೇಳಿಲ್ಲ. ರಾಮದಾಸ್ ರವರು ನನ್ನ ವಿರುದ್ದ ಕೇಸು ಹಾಕಿರುತ್ತಾರೆ ಎಂದರೆ ಸರಿ. ಅದೇ ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಇರುತ್ತದೆ. ಈಗ ಸಾಕ್ಷಿಗೆ

**ಸಿಸಿನಂ.12724/2008**

ಸದರಿ ದಾಖಲೆಯನ್ನು ತೋರಿಸಿ ಅದು ರಾಮದಾಸ್ ರವರು ನನ್ನ ವಿರುದ್ದ ಹಾಕಿರುವ ಕೇಸಿನ ದಾಖಲೆ ಎಂದರೆ ಸರಿ. ಅವುಗಳನ್ನು ಕ್ರಮವಾಗಿ ನಿಪಿ.72 ರಿಂದ 75 ಎಂದು ಗುರುತಿಸಲಾಯಿತು. ನಿಡಿ.7 ನ್ನು ರಾಮದಾಸ್ ರವರು ಸಂಘಕ್ಕೆ ಕೊಟ್ಟ ಪತ್ರವಾಗಿರುತ್ತದೆ. ಅದನ್ನು ನಾನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಅವರು ಕೊಟ್ಟಿಲ್ಲ ಎಂದರೆ ಸರಿಯಲ್ಲ.

15. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಅದು ಮರಿಯಪ್ಪ ರವರು ಕೊಟ್ಟ ಪತ್ರ ಎಂದರೆ ಗೊತ್ತಿಲ್ಲ. ಅದರ ಮೇಲೆ ಮರಿಯಪ್ಪ ರವರ ಸಹಿ ಇರುತ್ತದೆ ಎಂದರೆ ಸರಿ . ಸದರಿ ಪತ್ರವನ್ನು ನಿಪಿ.76 ಎಂದು ಗುರುತಿಸಲಾಯಿತು. ಈಗಾಗಲೇ ಈ ಮೇಲೆ ಸಾಕ್ಷಿ ಒಪ್ಪಿಕೊಂಡ ಮೆಮೋ ವನ್ನು ನಿಪಿ.77 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**